**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪಿರಿಯಾಪಟ್ಟಣ.**

**ಸಿ.ಸಿ. ಸಂಃ 1175/2019**

| | | |
|---|---|---|
| ಸಾಕ್ಷಿಯ ಹೆಸರುಃ | ಸ್ವಾಮಿ | ಫ್ರಾಸಾಃಃ 8 |
| ತಂದೆಯ ಹೆಸರುಃ | ಲೇಟ್ ಕರಿಗೌಡ | ಚಾಸಾಃಃ 5 |
| ವಯಸ್ಸುಃ | 50 ವರ್ಷ | ಪ್ರಮಾಣೀಕರಿಸಿದ ದಿಃ 10.06.2025 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಮಾಲಂಗಿ ಗೋಮಾಳ ಗ್ರಾಮ, ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ ಸಸಅ ರಿಂದಃ**

ನನಗೆ ಚಾಸಾ-1 ಮತ್ತು ಆರೋಪಿಯ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ಕಂಡಿರುವುದಿಲ್ಲ. ಆ ಸಂಬಂಧ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಸಸಅ ರವರಿಂದಃ

1. ಚಾಸಾ-2 ರವರಿಗೆ ಸೇರಿದ ಸರ್ವೆ ನಂಬರ್ 67/7 ಜಮೀನಿನಲ್ಲಿ ದಿ. 20.02.2019 ರಂದು ಬೆಳಿಗ್ಗೆ 08.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-3 ಮತ್ತು 4 ರವರು ಬ್ಯಾರನ್ ಮನೆಯ ಸಾಮಾನುಗಳನ್ನು ತೆಗೆದು ಗುಡ್ಡೆ ಮಾಡುತ್ತಿದ್ದಾಗ ಈ ಕೇಸಿನ ಆರೋಪಿ ಗೋವಿಂದೇಗೌಡ ರವರು ಅಲ್ಲಿಗೆ ಬಂದು ಚಾಸಾ-2 ಎಂ.ಡಿ. ರಘು ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಚಾಸಾ-3 ರವರಿಗೆ ಸೂಳೇ ಮಕ್ಕಳಾ ಯಾಕೆ ಇಲ್ಲಿ ಬ್ಯಾರನ್ ಮನೆ

ಸಾಮಾನುಗಳನ್ನು ಕಿತ್ತು ಹಾಕುತ್ತಿದ್ದಿಯಾ ಎಂದು ಅವಾಚ್ಯವಾಗಿ ನಿಂದಿಸಿದರು ಎಂದರೆ ಸರಿಯಲ್ಲ.

2. ನಂತರ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-3 ರವರಿಗೆ ಹೊಡೆಯಲು ಬಂದಾಗ ಚಾಸಾ-3 ರವರು ತಪ್ಪಿಸಿಕೊಂಡು ಓಡುತ್ತಿದ್ದಾಗ ಚಾಸಾ-3 ರವರನ್ನು ಹಿಂಬಾಲಿಸಿಕೊಂಡು ಓಡಿಸಿಕೊಂಡು ಹೋಗುತ್ತಿದ್ದಾಗ ಅಲ್ಲೇ ಇದ್ದ ಚಾಸಾ-1 ಪುಟ್ಟಮ್ಮ ರವರು ಏಕೆ ಅವರಿಗೆ ಹೊಡೆಯೋಕೆ ಹೊಗುತ್ತಿದ್ದಿಯಾ, ಬೇಕಾದರೆ ನಿನ್ನ ಸಾಮಾನುಗಳನ್ನು ನೀನು ತೆಗೆದುಕೊಂಡು ಹೋಗು ಎಂದು ಹೇಳಿಳಿದ್ದಕ್ಕೆ ಚಾಸಾ-1 ರವರನ್ನು ಉದ್ದೇಶಿಸಿ ಮುಂಡೆ ನಿನ್ನಿಂದಲೇ ಇದೆಲ್ಲ ಆಗುತ್ತಾ ಇರೋದು ಎಂದು ಅವಾಚ್ಯವಾಗಿ ನಿಂದಿಸಿದರು ಎಂದರೆ ಸರಿಯಲ್ಲ.

3. ನಂತರ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ-1 ರವರ ಎಡದ ಕೈಗೆ ಹೊಡೆದು ಕೆಳಕ್ಕೆ ನೂಕಿದ ಪರಿಣಾಮ ಚಾಸಾ-1 ರವರ ಎಡ ಮುಂಗೈ ಮತ್ತು ಸೊಂಟದ ಕೆಳಭಾಗ ಮತ್ತು ಬೆನ್ನಿನ ಹಿಂಭಾಗಕ್ಕೆ ನೊವುಂಟು ಮಾಡಿದರು ಎಂದರೆ ಸರಿಯಲ್ಲ. ನಂತರ ಅಲ್ಲೇ ಇದ್ದ ನಾನು, ಚಾಸಾ-3 ಮತ್ತು 6 ರವರು ಜಗಳ ಬಿಡಿಸಿದೇವು ಎಂದರೆ ಸರಿಯಲ್ಲ. ನಂತರ ನಾವುಗಳು ಚಾಸಾ-1 ರವರನ್ನು ಸುಧಾರಿಸುತ್ತಿದ್ದಾಗ, ಆರೋಪಿ ಚಾಸಾ-1 ರವರಿಗೆ ಹೊಡೆದ ದೊಣ್ಣೆಯಿಂದ ಚಾಸಾ-6 ರವರ ಸೊಂಟಕ್ಕೆ ಹೊಡದನು ಎಂದರೆ ಸರಿಯಲ್ಲ. ನಂತರ ಏಟಾಗಿದ್ದ ಚಾಸಾ-1 ಪುಟ್ಟಮ್ಮ ರವರನ್ನು ಒಂದು ಆಟೋದಲ್ಲಿ ನಾನು, ಚಾಸಾ-3 ಮತ್ತು 4 ರವರು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದೇವು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಪೊಲೀಸ್ ರ ಮುಂದೆ ನಿ.ಪಿ.**9** ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ನಿ.ಪಿ.9 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದ್ದರೂ, ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ **ಪರ ವಕೀಲರಿಂದಃ**

ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.